# ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ. ಎಂ ಎಫ್. ಸಿ ನ್ಯಾಯಾಲಯ

## ಹಿರೇಕೆರೂರು

ಸಿ.ಸಿ. ನಂಃ 447/2024

**ಪಿ.ಡಬ್ಲ್ಯೂಃ 3**

ಸಿ.ಡಬ್ಲ್ಯೂಃ 3

ಸಾಕ್ಷಿದಾರರ ಹೆಸರುಃ – ಸಿದ್ದಪ್ಪ
ತಂದೆ ಹೆಸರು – ಗದೀಗೆಪ್ಪ ಬಣಕಾರ
ವಯಸ್ಸುಃ – 49 ವರ್ಷ
ಉದ್ಯೋಗ – ವ್ಯವಸಾಯ
ವಾಸಸ್ಥಳ – ಹಿರೇಯಡಚಿ

ದಿನಾಂಕಃ 18–11–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ – ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿದಾರರಿಗೆ **ನಿಪಿ–2** ರ ಪಂಚನಾಮೆ ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ–2(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿದಾರರು ನಿಪಿ–3 ಮತ್ತು 4 ರ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

2. ಸದರಿ ಸಹಿಯನ್ನು ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ನಿಪಿ–2 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ತಿಳಿದಿಲ್ಲ. ಯಾವ ಕಾರಣಕ್ಕೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 07–04–2024 ರಂದು ಆರೋಪಿಗಳು ಹಾಗೂ ಚಾಸಾ–1 ರವರ ನಡುವೆ ಆದ ಗಲಾಟೆಗೆ ಸಂಬಂಧಿಸಿದಂತೆ ಪೋಲಿಸರು ನನ್ನನ್ನು ಹಾಗೂ ಚಾಸಾ–2 ರವರನ್ನು ಪಂಚರನ್ನಾಗಿ ಬರಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಚಾಸಾ–1 ರವರು ಸ್ಥಳ ತೋರಿಸಿದ ಮೇರೆಗೆ ಪಂಚನಾಮೆಯನ್ನು ಬೆಳಿಗ್ಗೆ 11–30 ರಿಂದ 12–30 ರವರೆಗೆ ಜರುಗಿಸಿ, ಪೋಟೋ ತೆಗೆದು ಓದಿ ಹೇಳಿ ನಮ್ಮ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿಪಿ–3 ಪೋಟೋ ತೆಗೆದು, ಮು.ಮಾ.–1 ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಿ.ಡಬ್ಲ್ಯೂಃ 3**

ಸಿ.ಡಬ್ಲ್ಯೂಃ 3

**ಪಾಟೀ ಸವಾಲುಃ ಇಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 18-11-2025

Sd/-

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು